## ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ರಾಘವೇಂದ್ರ. ಬಿ.ವೈ. (ಶಿಕಾರಿಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1627 ಕ್ಕೆ ಉತ್ತರ

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಹಿಂದುಳಿದ ವರ್ಗಗಳ ಸಮುದಾಯದವರ ಅಭಿವೃದ್ಧಿ ಹಿತದೃಷ್ಟಿಯಿಂದ 2014 ರಿಂದ 2017 ರ ಅವಧಿಯಲ್ಲಿ ಮಂಜೂರಾತಿ ಪ್ರಾರಂಭವಾದ ನಿಗಮ, ಪ್ರಾಧಿಕಾರ ಮತ್ತು ಮಂಡಳಿಗಳು ಯಾವುವು; ಈ ಸಂಸ್ಥೆಗಳಿಗೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನ ಹಾಗೂ ಯಾವ ಯಾವ ಉದ್ದೇಶ/ಕಾರ್ಯಕ್ರಮಗಳಿಗೆ ಅನುದಾನ ಬಳಸಲಾಯಿತು. ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ವಾರ್ಷಿಕ ಮತ್ತು ಪರಿಶಿಷ್ಟ ಜಾತಿ/ಪಂಗಡಗಳು ನಿಗಮ/ಪ್ರಾಧಿಕಾರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಉತ್ತರಿಸಬೇಕಾಗಿದೆ.</td></tr>
<tr><td>ಆ</td><td>ಈ ಅವಧಿಯಲ್ಲಿ ಹಿಂದುಳಿದ ವರ್ಗದವರ ಸಮುದಾಯದವರಿಗೆ ಹಾಗೂ ಈ ಸಮುದಾಯಗಳ ಪುಣ್ಯಪುರುಷರುಗಳ ಹೆಸರಿನಲ್ಲಿ ಮಂಜೂರಾಗಿ ನಿರ್ಮಾಣಗೊಂಡ ಒಟ್ಟು ಭವನಗಳೆಷ್ಟು; ಪ್ರತಿ ಭವನಗಳ ನಿರ್ಮಾಣಕ್ಕೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನವೆಷ್ಟು; (ನಿರ್ಮಾಣವಾದ ಸ್ಥಳ ಸಹಿತ ಸಮುದಾಯವಾರು, ಪುಣ್ಯಪುರುಷರ ಹೆಸರಿನಡಿ ನಿರ್ಮಾಣವಾದ ಭವನ ಮತ್ತು ವಾರ್ಷಿಕವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2014-15 ರಿಂದ 2016-17ನೇ ಸಾಲಿನ ವರೆಗೆ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ಜನಾಂಗದ ಸಂಘ-ಸಂಸ್ಥೆಗಳಿಗೆ ಮಂಜೂರು ಮಾಡಿರುವ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳ ಸಂಖ್ಯೆ:</th></tr>
<tr><td>1</td><td>2014-15</td><td>597</td></tr>
<tr><td>2</td><td>2015-16</td><td>315</td></tr>
<tr><td>3</td><td>2016-17</td><td>199</td></tr>
<tr><td colspan="2">ಒಟ್ಟು</td><td>1111</td></tr>
</table>
ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ 2014-15ನೇ ಸಾಲಿನಿಂದ 2016-17ನೇ ಸಾಲಿನ ವರೆಗೆ ಮಂಜೂರಾತಿ ನೀಡಿರುವ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವರ್ಷವಾರು ವಿವರಗಳನ್ನು ಅನುಬಂಧ-1, 1ಎ ಮತ್ತು 1ಬಿ ರಲ್ಲಿ ಒದಗಿಸಲಾಗಿದೆ.</td></tr>
</table>

| | | |
|---|---|---|
| ಇ | ಈ ಅವಧಿಯಲ್ಲಿ ಹಿಂದುಳಿದ ವರ್ಗಗಳ ಸಮುದಾಯದ ಯಾವ ಯಾವ ಮಠ ಮಾನ್ಯಗಳಿಗೆ ಶಿಕ್ಷಣ ಸಂಸ್ಥೆ ಮತ್ತು ಇತರೆ ಸಂಸ್ಥೆಗಳಿಗೆ ನಿವೇಶನ/ಜಾಗ ಅಥವಾ ಅನುದಾನ ಮಂಜೂರು ಮಾಡಲಾಗಿದೆಯೇ; ಹಾಗಿದ್ದಲ್ಲಿ ಮಂಜೂರು ಮಾಡಿದ ನಿವೇಶನ/ಜಾಗ ಹಾಗೂ ಬಿಡುಗಡೆ ಮಾಡಲಾದ ಅನುದಾನವೆಷ್ಟು; | 2014-15ನೇ ಸಾಲಿನಿಂದ 2016-17ನೇ ಸಾಲಿನ ವರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಯಾವುದೇ ಮಠ-ಮಾನ್ಯ, ಶಿಕ್ಷಣ ಸಂಸ್ಥೆ ಮತ್ತು ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳಿಗೆ ನಿವೇಶನ/ಜಾಗ ಮಂಜೂರಾತಿ ನೀಡಿರುವುದಿಲ್ಲ ಮತ್ತು ಜಾಗ/ನಿವೇಶನ ಖರೀದಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುದಾನ ಮಂಜೂರು ಮಾಡಿರುವುದಿಲ್ಲ. |
| ಈ | ಅನುದಾನದಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ? (ಹಿಂದುಳಿದ ವರ್ಗಗಳ ಸಮುದಾಯದ ಮಠ/ಶಿಕ್ಷಣ ಸಂಸ್ಥೆ ಮತ್ತು ಇತರೆ ಸಂಸ್ಥೆವಾರು ಸಂಪೂರ್ಣ ಮಾಹಿತಿ ನೀಡುವುದು) | ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ 2014-15ನೇ ಸಾಲಿನಿಂದ 2016-17ನೇ ಸಾಲಿನ ವರೆಗೆ ಮಠ-ಮಾನ್ಯ, ಶಿಕ್ಷಣ ಸಂಸ್ಥೆ ಮತ್ತು ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳಿಗೆ ಸಮುದಾಯ ಭವನ ಹಾಗೂ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಮಂಜೂರಾತಿ ನೀಡಲಾಗಿದೆ. ಈ ಅವಧಿಯಲ್ಲಿ ಮಠ, ಶಿಕ್ಷಣ ಸಂಸ್ಥೆ ಮತ್ತು ಸಂಘ-ಸಂಸ್ಥೆಗಳ ವರ್ಷವಾರು ಬಿಡುಗಡೆ ಮಾಡಿರುವ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಮೇಲಿನ ಅನುಬಂಧ-1. 1ಎ ಮತ್ತು 1ಬಿ ರಲ್ಲಿಯೇ ಒದಗಿಸಲಾಗಿದೆ. |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

D:\d drive\2016-17 Eoffice\LAQ-1627.docx